**ಎಸ್.ಸಿ.ಸಂಖ್ಯೆಃ10035/2025**
**ಪ್ರಾ.ಸಾ.ಸಂಖ್ಯೆಃ 6**
**ಚಾ.ಸಾ.ಸಂಖ್ಯೆಃ 6**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಕರಿಯಪ್ಪ ತಳವಾರ |
| ತಂದೆಯ ಹೆಸರುಃ | ಗಂಗಪ್ಪ |
| ವಯಸ್ಸುಃ | **66** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಚಾಸಾ-**1, 10, 11** ನನ್ನ ಮಕ್ಕಳು. **7** ನನ್ನ ಹೆಂಡತಿ. ಚಾಸಾ-**12** ರಿಂದ **15** ನನ್ನ ಸಂಬಂಧಿಕರು ಇರುತ್ತಾರೆ. ಸುಮಾರು ಎರಡು ವರ್ಷಗಳ ಹಿಂದೆ ಚಾಸಾ-**1** ನ್ಯಾಯಾಲಯದ ಮುಂದಿರುವ **1** ನೇ ಆರೋಪಿ ಚೇತನ ಈತನನ್ನು ಪ್ರೀತಿ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಅವಳ ಪ್ರೀತಿಯನ್ನು ನಮ್ಮ ಹಾಗೂ ಅವರ ಸಮಾಜ ಬೇರೆ ಬೇರೆ ಇರುವುದರಿಂದ ಅದನ್ನು ವಿರೋಧಿಸಿದ್ದು, ಅದನ್ನು ನಿಲ್ಲಿಸಬೇಕೆಂದು ಹೇಳಿದ್ದೆವು.

**2.** ಅದಾದ ಒಂದು ವಾರದ ನಂತರ ಚಾಸಾ-**1** ಒಂದು ದಿವಸ ತಾನು ಮುಧೋಳದ ಕಾಲೇಜಗೆ ಹೋಗುವಾಗ ಆರೋಪಿತರು ತೊಂದರೆ ಕೊಟ್ಟರು ಅಂತ ಬಂದು ಹೇಳಿದಳು. ನಂತರ ಊರ ಹಿರಿಯರಾದ ಸದಪ್ಪ ತಗ್ಗಿ, ಅಗಸಿಮನಿ ಗಂಗಪ್ಪ, ಹನಮಂತ ತೆಗ್ಗಿನಮನಿ, ಹಾಗೂ ಇತರರು ಸೇರಿ ಆ ರೀತಿ ತೊಂದರೆ ಕೊಡಲಾರದಂತೆ ತಾಕೀತು ಮಾಡಿದೆವು. ಒಂದು ತಿಂಗಳ ನಂತರ ನಾವು ಒಂದು ದಿವಸ ಮನೆಯಲ್ಲಿ ನಮ್ಮ ಕುಟುಂಬದವರೆಲ್ಲರೂ ಮಲಗಿದ್ದಾಗ **1** ನೇ ಆರೋಪಿ ರಾತ್ರಿ **12** ರಿಂದ **1** ಗಂಟೆಯ ಅವಧಿಯಲ್ಲಿ ನಮ್ಮ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದ್ದ. ಚಾಸಾ-**10** ನಿಂಗವ್ವ ನೋಡಿ ಕೂಗಿದ್ದರಿಂದ ಅವನು ಹೊರಟು ಹೋದ.

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 6**
**ಚಾ.ಸಾ.ಸಂಖ್ಯೆಃ 6**

**3.** ನಂತರ ನಾನು ಕಟ್ಟೆಯ ಮೇಲೆ ಮಲಗಿಕೊಂಡಿದ್ದೆ. ಅಂಗಳದಲ್ಲಿ ಮಹಾದೇವಿ, ನಿಂಗವ್ವ, ಲಕ್ಕವ್ವ, ಮಂಜು ಅಂಗಳದಲ್ಲಿ ಮಲಗಿದ್ದರು. ಸುಮಾರು ರಾತ್ರಿ **12** ರಿಂದ **1-00** ಗಂಟೆಯ ಅವಧಿಯಲ್ಲಿ ಆರೋಪಿ ನಂ. **1** ಚಾಸಾ-**1** ಇವಳಿಗೆ ಬಲಗಡೆ ಹಣೆಯ ಮೇಲೆ ಕಲ್ಲು ಒಗೆದಿದ್ದ. ಬಾಯಿ ಮಾಡಿದ್ದರಿಂದ ನಾವು ಹೊರಗೆ ಬಂದೆವು. ಆಗ ಅವನು ಒಂದು ಮೋಟಾರ್ ಸೈಕಲ ಮೇಲೆ ಹೋದ.

**4.**ನಂತರ ಅವಳನ್ನು ಮುಧೋಳದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ನಂತರ ನಾವು ಅವಳನ್ನು ಬಾಗಲಕೋಟೆಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಾಸಾ-**1** ರವರು **10** ದಿನಗಳ ಕಾಲ ಚಿಕಿತ್ಸೆ ಪಡೆದಿದ್ದಾಳೆ. ನಮಗೆ ಎರಡುವರೆ ಲಕ್ಷ ರೂಪಾಯಿ ಖರ್ಚಾಗಿದೆ. ಈಗ ನೋಡುತ್ತಿರುವ ಮುಮಾ-**2** ಆರೋಪಿ ನಂ. **1** ಚಾಸಾ-**1** ಇವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲು ಇರುತ್ತದೆ. ಮುಮಾ-**1** ಅವಳ ರಕ್ತ ಹತ್ತಿದ ಚೂಡಿದಾರ ಟಾಪ್ ಹಾಗೂ ಮುಮಾ-**3** ರಕ್ತ ಹತ್ತಿದ ದಿಂಬು ಇರುತ್ತದೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:**

**1.** ನಾವು ಮನೆಯಲ್ಲಿ ಒಟ್ಟು ಆರು ಜನ ಇರುತ್ತೇವೆ. ನಾನು, ನನ್ನ ಇಬ್ಬರು ಗಂಡು ಮಕ್ಕಳು, ನನ್ನ ಹೆಂಡತಿ ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತೇವೆ. ಹೆಣ್ಣು ಮಕ್ಕಳಲ್ಲಿ ನಿಂಗವ್ವ ಹಾಗೂ ಸುರೇಖಾ ಇವರ ಮದುವೆಯಾಗಿರುತ್ತದೆ. ಅವರನ್ನು ನಮ್ಮ ಊರಿನಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತೇವೆ. ಅವರು ತಮ್ಮ ಗಂಡನ ಮನೆಯಲ್ಲಿಯೇ ಇರುತ್ತಾರೆ ಎಂದರೆ ಸರಿ. ನಾನು ಮಲಗಿಕೊಂಡಿದ್ದ ಕಟ್ಟೆಯಿಂದ ಘಟನಾ ಸ್ಥಳ ಸುಮಾರು **10-12** ಮಾರು ದೂರ ಇರುತ್ತದೆ. ಆ ದಿವಸ ಕಟ್ಟೆಯ ಮೇಲೆ ನಾನು ಮಾತ್ರ ಮಲಗಿಕೊಂಡಿದ್ದೆ. ನಿಂಗವ್ವ ಆ ದಿವಸ ಗಂಡನ ಮನೆಯಲ್ಲಿ ಇದ್ದಳು ಎಂದರೆ ಸರಿ. ಚಾಸಾ-**12** ರೂಪಾ ತನ್ನ ಗಂಡನ ಮನೆಯಲ್ಲಿ ಮಲಗಿಕೊಂಡಿದ್ದಳು ಎಂದರೆ ಸರಿ.

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 6**
**ಚಾ.ಸಾ.ಸಂಖ್ಯೆಃ 6**

**2.** ನನ್ನ ಮಗಳು ಕೂಗಾಡಿದಾಗ ಆರೋಪಿ ಕಲ್ಲು ಹಿಡಿದುಕೊಂಡು ನಿಂತಿದ್ದ. ನನ್ನ ಮಗಳಿಗೆ ರಕ್ತ ಗಾಯವಾಗಿದ್ದನ್ನು ನೋಡಿ ನನಗೆ ಕೂಗಲು ಆಗಲಿಲ್ಲ. ರಕ್ತ ಎರಡನೇಯ ಸಾರಿ ಕಲ್ಲು ಒಗೆದಾಗ ಬಂತು. ಮೊದಲನೇಯ ಸಾರಿ ಬಂದಾಗ ನಾವು ಆರೋಪಿತನನ್ನು ಹಿಡಿಯಲು ಪ್ರಯತ್ನಿಸಲಿಲ್ಲ. ಮಂಜು ಚಾಸಾ-**9** ಅಂಗಳದಲ್ಲಿ ಪಕ್ಕದಲ್ಲಿಯೇ ಮಲಗಿಕೊಂಡಿದ್ದ. ಆರೋಪಿ ಓಡಿ ಹೋಗುವಾಗ ಚಾಸಾ-**9** ಬೆನ್ನಟ್ಟಿದ. ಮೋಟಾರ್ ಸೈಕಲ **10-15** ಮಾರು ದೂರ ಇತ್ತು. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಮೋಟಾರ್ ಸೈಕಲ ಆಗಲಿ ಚೇತನ ಆಗಲಿ ಇರಲಿಲ್ಲ ಎಂದರೆ ಸರಿಯಲ್ಲ.

**3.** ಚಾಸಾ-**1** ಇವಳನ್ನು ಆಸ್ಪತ್ರೆಗೆ ಲಕ್ಷ್ಮಣ ಉಳ್ಳಾಗಡ್ಡಿ, ನಿಂಗವ್ವ ಹಾಗೂ ಲಕ್ಕವ್ವ ಕರೆದುಕೊಂಡು ಹೋದರು. ನಮಗೂ ಹಾಗೂ ಆರೋಪಿ ನಂ. **1** ಇವರ ಮನರೆಯವರಿಗೂ ಜಗಳವಿತ್ತು ಎಂದರೆ ಸರಿಯಲ್ಲ. ಆರೋಪಿ ನಂ. **2** ಮುಂಬೈನಲ್ಲಿಯೇ ವಾಸವಿದ್ದಾಳೆ ಎಂದರೆ ಸಾಕ್ಷಿದಾರರು " ನಿಜ, ಆಗಾಗ ಬಂದು ಹೋಗುತ್ತಾರೆ" ಅಂತ ಹೇಳುತ್ತಾರೆ. ಘಟನೆ ನಡೆದಿದೆ ಅಂತ ಹೇಳುವ ಕಾಲದಲ್ಲಿ ಆರೋಪಿ ನಂ. **1** ಕೂಡ ನಮ್ಮ ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯಸಾಕ್ಷಿಯಲ್ಲಿ ಹೇಳಿದ ಯಾವುದೇ ಘಟನೆ ನಡೆಯದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:</u>**

(ಮೇಲಿನ ಪಾಟಿಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.)

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**